# ಗದ್ಯ ಭಾಗ

## 7. ಊರುಭಂಗ

ಮೂಲ : ಭಾಸಕವಿ ಅನು : ಎಲ್. ಬಸವರಾಜು

### ಕೃತಿಕಾರರ ಪರಿಚಯ

ಭಾಸನು ಸಂಸ್ಕೃತದ ಪ್ರಸಿದ್ಧ ನಾಟಕಕಾರ. ಈತ ಕಾಳಿದಾಸನಿಗಿಂತ ಸುಮಾರು ಐದುನೂರು ವರ್ಷಗಳಷ್ಟು ಹಿಂದಿನವನು. ಈತನ ಕಾಲ ಸುಮಾರು ಕ್ರಿಸ್ತಪೂರ್ವ 300. **ದಕ್ಷಿಣ ಭಾರತದವನು. ಪ್ರತಿಜ್ಞಾ ಯೌಗಂಧರಾಯಣ, ಸ್ವಪ್ನವಾಸವದತ್ತ, ಚಾರುದತ್ತ** ಇವು ಬೃಹತ್ಕಥೆ ಆಧಾರಿತವಾದವು. ಪ್ರತಿಮಾ ನಾಟಕ, ಅಭಿಷೇಕ, ಯಜ್ಞಫಲ ಇವು ರಾಮಾಯಣಕ್ಕೆ ಸಂಬಂಧಿಸಿದವು. ಪಂಚರಾತ್ರಾ, ಮಧ್ಯಮ ವ್ಯಾಯೋಗ, **ದೂತವಾಕ್ಯ, ದೂತ ಘಟೋತ್ಕಚ, ಕರ್ಣಭಾರ, ಊರುಭಂಗ** ಇವು ಮಹಾಭಾರತ ಆಧಾರಿತ ನಾಟಕಗಳು. ಭಾಸನ 'ಊರುಭಂಗ' ವನ್ನು ಸಮರ್ಥವಾಗಿ ಕನ್ನಡಕ್ಕೆ ಅನುವಾದಿಸಿದವರು ಡಾ. ಎಲ್. ಬಸವರಾಜು ಅವರು. ಕನ್ನಡದ ಮಹತ್ವದ ಸಂಶೋಧಕರು, ವಿದ್ವಾಂಸರು ಆಗಿರುವ ಎಲ್. ಬಸವರಾಜು ಕೋಲಾರದವರು. ಪಂಪಭಾರತದ ಸರಳ ಗದ್ಯಾನುವಾದ ಮೂಲತ ಬುದ್ಧಚರಿತದ ಗದ್ಯಾನುವಾದ, ನೂರಾರು ಸಂಶೋಧನಾ ಕೃತಿಗಳನ್ನು ಪ್ರಕಟಿಸಿದ್ದಾರೆ.

ಡಾ. ಎಲ್. ಬಸವರಾಜು (ಲಿಂಗಪ್ಪ ಬಸವರಾಜು) ಅವರು ಕನ್ನಡಕ್ಕೆ ಭಾಷಾಂತರಿಸಿರುವ **'ನಾಟಕ ಸಂಪುಟ'** ಕೃತಿಯಿಂದ ಭಾಸನ 'ಊರುಭಂಗ' ನಾಟಕವನ್ನು ಆರಿಸಿಕೊಳ್ಳಲಾಗಿದೆ.

### ಆಶಯ ಭಾವ

ಮಹಾಭಾರತದ ಕಥಾವಸ್ತುವನ್ನು ಆಧಾರವಾಗಿಟ್ಟುಕೊಂಡು ಅದಕ್ಕೆ ಹೊಸ ಘಟನೆ ಮತ್ತು ಹೊಸ ಸನ್ನಿವೇಶಗಳನ್ನು ಜೋಡಿಸಿ ಭಾಸನು ಸಂಸ್ಕೃತದಲ್ಲಿ ಬರೆದಿರುವ 'ಊರುಭಂಗ' ನಾಟಕವು ವಿಶಿಷ್ಟವಾದುದು. ಊರುಬಂಗ ಇಡೀ ಪ್ರಾಚೀನ ಭಾರತೀಯ ನಾಟಕ ಸಾಹಿತ್ಯದಲ್ಲಿ ಎಲ್ಲೆಲ್ಲಿಯೂ ಸಿಗದ ಒಂದು ಅಪೂರ್ವ ರೂಪಕ (ನಾಟಕ) ಪ್ರಕಾರ. ಇಲ್ಲಿ ಮೊತ್ತಮೊದಲ ಬಾರಿಗೆ ದುರ್ಯೋಧನನ ದುರಂತ ಪಾತ್ರದ ಕಲ್ಪನೆ ಬರುತ್ತದೆ. ದುರ್ಜಯ ಎಂಬ ಮಗನ ಪಾತ್ರವನ್ನು ಪ್ರವೇಶ ಮಾಡಿಸಿ, ಈ ನಾಟಕದ ದುರಂತವನ್ನು ತೀವ್ರಗೊಳಿಸಿರುವ ಭಾಸನ ಕಲಾಭಿಜ್ಞತೆಯು ಆಶ್ಚರ್ಯವನ್ನು ಉಂಟುಮಾಡುತ್ತದೆ.

### ಪದಗಳ ಅರ್ಥ

| | |
|---|---|
| ಅಂಜಲಿಬದ್ಧ – ಕೈಮುಗಿದವ | ಇರುಳುಗಾಳಗ – ರಾತ್ರಿಯುದ್ಧ |
| ಉಕ್ಕಂದ – ಉತ್ಸಾಹ, ಹುರುಪು | ಉತ್ಕಂಠತೆ – ಉತ್ಸುಕತೆ |
| ಉತ್ಪಾಟನ – ನಾಶಗೊಳಿಸುವುದು | ಊರು – ತೊಡೆ ಕೋಪಾರುಣ |
| ನೇತ್ರ – ಕೋಪದಿಂದ ಕೆಂಪಾದ ಕಣ್ಣು | ದೇದೀಪ್ಯ – ಪ್ರಕಾಶ ನಿತ್ಯಾಸ್ತಮಿತಲೋಚನ |
| ಪ್ರದೀಪ್ತ – ಬೆಳಗುವವನು | ಭಂಗಾರ – ಬಂಗಾರ |
| ರಿಪುಬಲ – ಶತ್ರುಸೈನ್ಯ | ಹುರುಪು, ಉತ್ಸಾಹ, ಸಡಗರ. |

### ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ದುರ್ಯೋಧನನು ನೆಲಕ್ಕುರುಳಿದ ಭೀಮನನ್ನು ಏನೆಂದು ಮೂದಲಿಸುತ್ತಾನೆ?
   **ಉತ್ತರ** : ದುರ್ಯೋಧನನು ನೆಲಕ್ಕುರುಳಿದ ಭೀಮನನ್ನು **"ಹೆದರಬೇಡ ಭೀಮ, ನೆಲಕ್ಕೆ ಬಿದ್ದ ಶತ್ರುವನ್ನು ಯಾವ ವೀರನು ಘಾತಿಸುವಿದಲ್ಲ"** ಎಂದು ಮೂದಲಿಸುತ್ತಾನೆ.
2. ತೊಡೆ ಮುರಿದು ಬಿದ್ದಿದ್ದ ದುರ್ಯೋಧನನ್ನು ನೋಡಲು ಯಾರು ಯಾರು ಬಂದರು?
   **ಉತ್ತರ** : ತೊಡೆ ಮುರಿದು ಬಿದ್ದಿದ್ದ ದುರ್ಯೋಧನನ್ನು ನೋಡಲು ಬಲರಾಮ, ಧೃತರಾಷ್ಟ್ರ, ಗಾಂಧಾರಿ, ಅಶ್ವತ್ಥಾಮ ಮತು ಅವನ ಮಗ ದುರ್ಜಯ ಬಂದರು.
3. ದುರ್ಯೋಧನನು ದುರ್ಜಯನಿಗೆ ಏನೆಂದು ಬುದ್ಧಿವಾದವನ್ನು ಹೇಳುತ್ತಾನೆ?
   **ಉತ್ತರ** : ದುರ್ಯೊಧನನು ದುರ್ಜಯನನ್ನು ತನ್ನಬಳಿ ಕರೆದು **"ನನಗೆ ಹೇಗೋ ಹಾಗೆ ಪಾಂಡವರಿಗೂ** ವಿಧೇಯನಾಗಿರು. ಎಂದು ಬುದ್ಧಿವಾದವನ್ನು ಹೇಳಿದನು.
4. ಅಶ್ವತ್ಥಾಮನು ದುರ್ಯೋಧನನಿಗೆ "ತಾನು ಏನು ಮಾಡಲು ಸಿದ್ಧನಾಗಿದ್ದೇನೆ" ಎಂದು ಹೇಳುತ್ತಾನೆ?
   ಉತ್ತರ : ಅಶ್ವತ್ಥಾಮನು ದುರ್ಯೋಧನನಿಗೆ **'ಕೃಷ್ಣನನ್ನು ಪಾಂಡುತನಯಸಹಿತವಾಗಿ ನಾಶ ಮಾಡಲು'** ತಾನು ಸಿದ್ಧನಾಗಿದ್ದೇನೆ ಎಂದು ಹೇಳುತ್ತಾನೆ.
5. ಅಶ್ವತ್ಥಾಮನು "ನಿನ್ನ ದರ್ಪವೆಲ್ಲವೂ ಮುರಿದು ಬಿತ್ತೇ" ಎಂದಾಗ ದುರ್ಯೋಧನನು ಏನು ಹೇಳುತ್ತಾನೆ?

ಉತ್ತರ : ಅಶ್ವತ್ಥಾಮನು ನಿನ್ನ ದರ್ಪವೆಲ್ಲವೂ ಮುರಿದು ಬಿತ್ತೇ ಎಂದಾಗ ದುರ್ಯೋಧನನು **"ರಾಜರಿಗೆ ಅಭಿಮಾನವೇ ಶರೀರ ಆ ಅಭಿಮಾನಕ್ಕಾಗಿಯೇ ನಾನು ಯುದ್ಧವನ್ನು ಕೈಗೊಂಡಿದ್ದು"** ಎಂದು ಹೇಳುತ್ತಾನೆ.

## ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಅಶ್ವತ್ಥಾಮನು ಕೃಷ್ಣನನ್ನು ಚಿಮ್ಮಿಬಿಡುತ್ತೇನೆ ಎಂದಾಗ ದುರ್ಯೋಧನನು ಏನು ಹೇಳಿದನು?
   **ಉತ್ತರ** : ಅಶ್ವತ್ಥಾಮನು ಕೃಷ್ಣನನ್ನು ಚಿತ್ರಪಟವನ್ನೆತ್ತಿ ಬಿಸುಡುವಂತೆ ಶಸ್ತ್ರಸಂಧಾನದಿಂದ ಚಿಮ್ಮಿಬಿಡುತ್ತೇನೆ ಎಂದಾಗ ದುರ್ಯೋಧನನು "ಅಯ್ಯೋ ಹಾಗೆ ಹೇಳುವುದು ಸರಿಯಲ್ಲ, ಅಭಿಷಿಕ್ತ ರಾಜರೆಲ್ಲರೂ ಭೂಮಿತಾಯಿ ಮಡಿಲಲ್ಲಿ ಮಲಗಿಬಿಟ್ಟರು. ಕರ್ಣನು ಸ್ವರ್ಗಸ್ಥನಾದನು, ಭೀಷ್ಮಾಚಾರ್ಯರ ದೇಹಪಾತವಾಯಿತು. ತಮ್ಮಂದಿರೂ ಗತಿಸಿಹೋದರು. ತನ್ನಗತಿಯೂ ಹೀಗಾಯಿತು. ಇನ್ನು ಬಿಲ್ಲನ್ನು ಹಿಡಿಯುವುದರಲ್ಲಿ ಅರ್ಥವಿಲ್ಲ, ಬಿಲ್ಲನ್ನು ಬಿಸಾಡು ಗುರುಪುತ್ರ" ಎಂದು ಹೇಳಿದನು.
2. ಅಶ್ವತ್ಥಾಮನ ಧನುಷ್ಠಾಂಕಾರ ಕೇಳಿದ ಬಲರಾಮನು ನುಡಿದ ನುಡಿಗಳೇನು?
   **ಉತ್ತರ** : ಅಶ್ವತ್ಥಾಮನ ಧನುಷ್ಠಾಂಕಾರ ಕೇಳಿದ ಬಲರಾಮನು "ರಣದುಂಬಿಗಳ ಮೊಳಗು ನಿಂತು ಮೂಕನಾದ ಬಾಣ-ಕವಚ-ಚಾಮರ ಛತ್ರಗಳು ಚೆಲ್ಲಿರುವ, ಯೋಧರೂ ಸೂತರು ಸತ್ತು ಬಿದ್ದಿರುವ ಈ ರಣರಂಗದಲ್ಲಿ ತನ್ನ ಧನುಷ್ಠಾಂಕಾರದಿಂದ ಕಾಗೆಗಳ ಗುಂಪನ್ನು ಹೆದರಿಸಿ, ಆಕಾಶದ ತುಂಬ ಚದುರುವಂತೆ ಮಾಡಿದವನು ಯಾರು? ಎಂದು ನುಡಿದು ಪಕ್ಕಕ್ಕೆ ನಿಟ್ಟಿಸಿ ನೋಡಿದಾಗ ಅವನೇ ಗುರುಪುತ್ರ ಅಶ್ವತ್ಥಾಮ ಎಂಬುದು ಬಲರಾಮನಿಗೆ ತಿಳಿಯಿತು.
3. ದುರ್ಜಯನು ತನ್ನ ಬಳಿ ಬರುತ್ತಿರುವುದನ್ನು ಕಂಡ ದುರ್ಯೋಧನನು ಏನೆಂದುಕೊಳ್ಳುತ್ತಾನೆ?
   **ಉತ್ತರ** : ದುರ್ಜಯನು ಓಡುತ್ತಾ ತನ್ನ ಬಳಿ ಬರುತ್ತಿರುವುದನ್ನು ಕಂಡು ದುರ್ಯೋಧನನು "ಅಹಾ! ಈ ಚಿಣ್ಣನೂ ಬಂದ. ಹೃದಯದಲ್ಲಿ ಸದಾ ಸನ್ನಿಹಿತವಾಗಿರುವ ಪುತ್ರಸ್ನೇಹವು ತನ್ನನ್ನೀಗ ದಹಿಸುತ್ತಿದೆ. ತನ್ನ ತೊಡೆಯ ಮಲಗಲು ಯೋಗ್ಯನಾದ ಹಸುಳೆ ದುರ್ಜಯನು ದುಃಖ ಎಂದರೇನೆಂಬುದನ್ನು ಅರಿಯನು. ಸೋತುಬಿದ್ದು ಈ ದುರವಸ್ಥೆಯಲ್ಲಿರುವ ತನ್ನನ್ನು ಕಂಡು ಏನೆಂದುಕೊಂಡಾನೋ" ಎಂದು ಮನದಲ್ಲಿ ಅಂದುಕೊಂಡನು.
4. ಪಾಂಡವರು ತನ್ನ ದರ್ಪವನ್ನು ಮುರಿದರೆಂಬ ಮಾತು ಅತ್ಯಲ್ಪ ಎಂಬುದನ್ನು ದುರ್ಯೋಧನನನು ಹೇಗೆ ಸಮರ್ಥಿಸಿದ್ದಾನೆ?
   **ಉತ್ತರ** : ದುರ್ಯೋಧನನು ರಣರಂಗದಲ್ಲಿ ತೊಡೆಮುರಿದು ಬಿದ್ದಿರುವುದನನು ಕಂಡು ಅಶ್ವತ್ಥಾಮನು ತನ್ನ ಶಸ್ತ್ರ ಸಂಧಾನದಿಂದ ಎಲ್ಲರನ್ನು ಚಿಮ್ಮಿಬಿಡುತ್ತೇನೆ ಎಂದನು. ಆಗ ದುರ್ಯೋಧನು "ಇನ್ನು ಯಾವುದೇ ಪ್ರಯೋಜನವಿಲ್ಲ. ತಾನು ಎಲ್ಲರನ್ನು ಕಳೆದುಕೊಂಡಾಗಿದೆ. ನಿನ್ನ ಬಿಲ್ಲನ್ನು ಬಿಸಾಡು ಗುರುಪುತ್ರ" ಎಂದಾಗ ಅಶ್ವತ್ಥಾಮನು "ಕುರುರಾಜ ಭೀಮನ ಗದಾಘಾತದಿಂದ ನಿನ್ನ ತೊಡೆಗಳ ಜೊತೆಯಲ್ಲಿ ನಿನ್ನದರ್ಪವೆಲ್ಲವೂ ಮುರಿದುಬಿತ್ತೇ" ಎಂದಾಗ ದುರ್ಯೋಧನನು **"ರಾಜರಿಗೆ ಅಭಿಮಾನವೇ ಶರೀರ ಆ ಅಭಿಮಾನಕ್ಕಾಗಿಯೇ ನಾನು ಯುದ್ಧವನ್ನು ಕೈಗೊಂಡಿದ್ದು. ಸಭೆಯಲ್ಲಿ ದ್ರೌಪಧಿಯನ್ನು ಮುಂದಲೆ ಹಿಡಿದೆಳೆದಾಡಿದೆವು. ಪಗಡೆ ಆಟದ ನೆಪದಲ್ಲಿ ಸೋತ ಪಾಂಡವರನ್ನು ವನ್ಯಮೃಗಗಳೊಡಗೂಡಿಸಿ ಕಾಡಿನಲ್ಲಿ ತಿರುಗಾಡಿಸಿದೆವು, ಇವುಗಳ ಮುಂದೆ ಪಾಂಡವರು ನನ್ನ ದರ್ಪವನ್ನು ಮುರಿದರೆಂಬ ಮಾತು ಅತ್ಯಲ್ಪವಲ್ಲವೇ ಆಲೋಚಿಸಿ ನೋಡು"** ಎಂದನು.

## ಇ) ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

1. ದುರ್ಯೋಧನನು ತಂದೆತಾಯಿಗಳಿಗೆ ಅಭಿವಂದಿಸುವ ಸಂದರ್ಭದಲ್ಲಿ ಧೃತರಾಷ್ಟ್ರ - ದುರ್ಯೋಧನರ ನಡುವೆ ನಡೆದ ಸಂಭಾಷಣೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ.
   **ಉತ್ತರ** : ದುರ್ಯೋಧನನು ರಣರಂಗದಲ್ಲಿ ಭೀಮನ ಗದಾಘಾತದಿಂದ ತೊಡೆ ಮುರಿದು ಬಿದ್ದಿರುತ್ತಾನೆ. ಇವನನ್ನು ಕಾಣಲು ಗಾಂಧಾರಿ ಮತ್ತು ಧೃತರಾಷ್ಟ್ರ ಬರುತ್ತಾರೆ. ರಣರಂಗದಲ್ಲಿ ದುರ್ಯೋಧನನ್ನು ಮುಟ್ಟಿ ಲೋಕಕ್ಕೆಲ್ಲ ಏಕೈಕ ನಾಯಕನೆನಿಸಿ ಬಂಗಾರದ ಕುಂಭದಂತೆ ಧೀರೋನ್ನತನಾಗಿದ್ದ ತನ್ನ ಮಗನೆಂದು ಮುರಿದುಬಿದ್ದ ಮಹಾದ್ವಾರದ ಲಾಳುಮುಂಡುಗಿಯಂತೆ ನೆಲದಲ್ಲಿ ಬಿದ್ದಿರುವನಲ್ಲಾ ಎಂದು ರೋ ೀಧಿಸುತ್ತಾನೆ. ಆಗ ದುರ್ಯೋಧನ ದುಃಖಿಸುವುದರಿಂದ ಪ್ರಯೋಜನವಿಲ್ಲ. ಎಂದಾಗ ಧೃತರಾಷ್ಟ್ರನು ದುಃಖಿಸದೆ ಹೇಗೆ ಇರಲಿ; ಈಗಾಗಲೇ ತನ್ನ ಎಲ್ಲಾ ಮಕ್ಕಳು ಹತರಾಗಿದ್ದಾರೆ ಇನ್ನು ಉಳಿದಿರುವುದು ನೀನೂ ಗತಿಸಿದರೆ ಸರ್ವವೂ ನಾಶವಾದಂತಯೇ ಎಂದಾಗ ದುರ್ಯೊಧನನು "ಅಪ್ಪಾಜಿ ಹೇಗೋ ಶೋಕ ನಿಗ್ರಹಿಸಿಕೊಂಡು ನನ್ನನ್ನು ಅನುಗ್ರಹಿಸಿ ಇದೋ ಇಂದು ನಿಮ್ಮ ಮುಂದೆ ಮಾತ್ರ ತಗ್ಗಿರುವ ಈ ತಲೆಯಿಂದ ನಿಮಗೆ ನಮಸ್ಕರಿಸಿ, ಯಾವ ಘನತೆಯಿಂದ ನಾನು ಹುಟ್ಟಿದೆನೋ ಅದೇ ಘನತೆಯಿಂದ ಸ್ವರ್ಗಕ್ಕೆ ಹೋಗುತ್ತೇನೆ" ಎಂದನು. ಆಗ ಧೃತರಾಷ್ಟ್ರನು ಹುಟ್ಟು ಕುರುಡನೂ, ವೃದ್ಧನೂ ಆದ ನನಗೆ ಬಾಳಿನ ಆಸೆಯೆಲ್ಲ ಇಂಗಿ ಹೋಗಿದೆಯಾದರೂ ಪ್ರಾಪ್ತವಾಗಿರುವ ಈ ಪುತ್ರಶೋಕವು ನನ್ನೆಲ್ಲ ಸಂಯಮವನ್ನು ಸಡಿಲಗೊಳಿಸಿ ನನ್ನಾತ್ಮವನ್ನು ಆಕ್ರಮಿಸಿಬಿಟಟಿದ್ದೆ" ಎಂದನು.

2. ದುರ್ಯೋಧನ ಮತ್ತು ದುರ್ಜಯರ ನಡುವೆ ನಡೆದ ಸಂಭಾಷಣೆಯನ್ನು ಸಂಗ್ರಹಿಸಿ ಬರೆಯಿರಿ.
   **ಉತ್ತರ** : ಧೃತರಾಷ್ಟ್ರನು ಮರಿ, ದುರ್ಜಯ, ಹೋಗಪ್ಪ - ನಿಮ್ಮಪ್ಪಾಜಿ ಎಲ್ಲಿರುವನೋ ಹುಡುಕು ಹೋಗು. ಎಂದಾಗ ದುರ್ಜಯನು ಆಗಲಿ ತಾತ, (ಮುಂದೆ ನಡೆದು) ತಾತ, ಇದೋ ಹೊರಟೆ. (ಎಂದು ಓಡುತ್ತ) ಅಪ್ಪಾಜೀ ಎಲ್ಲಿದ್ದೀರಾ? ಎಂದು ಹುಡುಕುತ್ತಾ ಬರುವುದನ್ನು ನೋಡಿದ ದುರ್ಯೋಧನನು ಸೋತುಬಿದ್ದು ಈ ದುರವಸ್ಥೆಯಲ್ಲಿರುವ ನನ್ನನ್ನು ಕಂಡು ಏನೆಂದಾನೋ? ಎಂದು ಯೋಚಿಸಿ ಅಪ್ಪಾ! ದುರ್ಜಯ, ಇಲ್ಲಿಗೇಕೆ ಬಂದೆ? ಎಂದು ಕೇಳಿದಾಗ ನೀವು ತಡಮಾಡಿದಿರಿ, ಹೊತ್ತಾಯಿತೆಂದು ಬಂದೆ. ಎಂದು ದುರ್ಜಯನು ಹೇಳಿ, ಅಪ್ಪಾಜಿ, ನಾನು ನಿಮ್ಮ ತೊಡೆಯ ಮೇಲೆ ಕುಳಿತುಕೊಳ್ಳುತ್ತೇನೆ! ಎಂದಾಗ 'ಬೇಡಪ್ಪ ಬೇರೆ ಎಲ್ಲಿಯಾದರೂ ಕುಳಿತುಕೋ' ಎಂದು ಹೇಳುತ್ತಾನೆ. ಇದುವರೆಗೂ ನೀನು ಕುಳಿತು, ಆಡಿ, ಮಲಗಿ,

ನಿನಗೆ ಚಿರಪರಿಚಿತವಾಗಿದ್ದ ಈ ತೊಡೆಯಿನ್ನು ನಿನ್ನ ಭಾಗಕ್ಕಿಲ್ಲವಪ್ಪ! ಎಂಬ ಮಾತು ದುರ್ಜಯನಿಗೆ ಅರ್ಥವಾಗದೇ ಯಾಕಪ್ಪಾಜಿ, ನೀವೆಲ್ಲಿಗೆ ಹೋಗುತ್ತೀರಿ?ಎಂದು ಕೇಳುತ್ತಾನೆ. ಇದಕ್ಕೆ ದುರ್ಯೋಧನನು ನನ್ನ ತಮ್ಮಂದಿರು ಇರುವಲ್ಲಿಗೆ ಹೋಗುತ್ತೇನೆ. ಅಪ್ಪಾಜಿ, ನನ್ನನ್ನೂ ಅಲ್ಲಿಗೆ ಕರೆದುಕೊಂಡು ಹೋಗಿ. ಎಂದು ಕೇಳುತ್ತಾನೆ. ಹೋಗು ಮಗನೇ, ಹಾಗೆಂದು ವೃಕೋದರನನ್ನು ಕೇಳು ಹೋಗು ಎಂದು ದುರ್ಯೋಧನನು ಹೇಳುತ್ತಾನೆ. ದುರ್ಜಯ : ಬನ್ನಿರಪ್ಪಾಜಿ ಹೋಗೋಣ, ನಮ್ಮನ್ನು ಹುಡುಕುತ್ತಿದ್ದಾರೆ.

ದುರ್ಯೋಧನ : ಯಾರಪ್ಪ?

ದುರ್ಜಯ : ಅಜ್ಜ, ಅಜ್ಜಿ ಎಲ್ಲರೂ.

ದುರ್ಯೋಧನ : ಮಗು ಹೋಗು, ನಾನು ನಡೆಯಲಾರೆನಪ್ಪ.

ದುರ್ಜಯ : ನಿಮ್ಮನ್ನೆತ್ತಿಕೊಳ್ಳುತ್ತೇನೆ ಬನ್ನಿರಪ್ಪಾಜಿ!

ದುರ್ಯೋಧನ : ಅಪ್ಪಾ ದುರ್ಜಯ, ನೀನಿನ್ನೂ ಚಿಕ್ಕವನು.

ದುರ್ಜಯ : (ಧೃತರಾಷ್ಟ್ರನ ಕಡೆ ತಿರುಗಿ) ತಾತ, ಬನ್ನಿ, ಅಪ್ಪಾಜಿಯಿಲ್ಲಿದ್ದಾರೆ. ಈ ರೀತಿ ದುರ್ಯೋಧನ ಮತ್ತು ದುರ್ಜಯರ ನಡುವೆ ನಡೆದ ಸಂಭಾಷಣೆ ನಡೆಯಿತು.

3. ಅಶ್ವತ್ಥಾಮನು ದುರ್ಯೋಧನನ ಬಳಿಸಾರುವ ಮೊದಲು ಆಡಿದ ನುಡಿಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ.
**ಉತ್ತರ** : ಸಮರಸಂರಂಭದಲ್ಲಿ? ಉಭಯಬಲಜಲಧಿಗಳೂ ಸಂಧಿಸಿದಾಗ ನೆಗೆದ ಶಸ್ತ್ರಗಳೆಂಬ ಮೊಸಳೆಗಳಿಂದ ಕಡಿವಡೆದ ದೇಹಗಳ ಮತ್ತು ಕೊನೆಯುಸಿರೆಳೆಯುತ್ತ ಕಂಠಗತವಾದ ಪ್ರಾಣಗಳ ಸಮರಶ್ರೇಷ್ಠ ರಾಜರೇ, ಕೇಳಿ, ನೀವೆಲ್ಲ ಕಿವಿಗೊಟ್ಟು ಕೇಳಿ; ಠಕ್ಕಿಗೊಳಗಾಗಿ ತೊಡೆ ಮುರಿಸಿಕೊಂಡ ಕೌರವನು ನಾನಲ್ಲ! ಶಿಥಿಲವೂ ವಿಫಲವೂ ಆದ ಅಸ್ತ್ರಗಳನ್ನು ಹಿಡಿದ ಸೂತಪುತ್ರ ನಾನಲ್ಲ; ಆಯುಧಗಳನ್ನು ಹಿಡಿದು ರಣಾಂಗಣದಲ್ಲಿ ಏಕಾಂಗಿಯಾಗಿ ನಿಂತಿದ್ದೇನೆ; ನಾನು ದ್ರೋಣಪುತ್ರ! ನಾನು ನವ್ಮ ತಂದೆಗೆ ಉತ್ತರ ಕ್ರಿಯೆಗಳನ್ನ ಮಾಡುವ ಮೊದಲೇ ದುರ್ಯೋಧನನು ಪಾಂಡವರಿಂದ ಮೋಸಕ್ಕೆ ಒಳಗಾದನಲ್ಲಾ! ಇದನ್ನು ಯಾರು ತಾನೇ ನಂಬಿಯಾರು? ರಥಗಳ ಮೇಲೆ, ಆನೆಗಳ ಮೇಲೆ ಕುಳಿತು, ಕೈಗಳಲ್ಲಿ ಬಿಲ್ಲುಗಳನ್ನು ಹಿಡಿದು, ಅಂಜಲಿಬದ್ಧರಾಗಿ ಉತ್ಕಂಠತೆಯಿಂದ ದುರ್ಯೋಧನನ ಆಜ್ಞೆಗಾಗಿ ಕಾಯುತ್ತಿದ್ದ ಹನ್ನೊಂದು ಅಕ್ಷೋಹಿಣೀ ಸೇನೆಯ ರಾಜರಿದ್ದರು; ಪರಶುರಾಮನ ಹರಿತವಾದ ಬಾಣಗಳೂ ಭೇದಿಸಲಾರದ ಕವಚವನ್ನು ತೊಟ್ಟ ಭೀಷ್ಮಾಚಾರ್ಯರು, ದ್ರೋಣಚಾರ್ಯರಂತಹವರು ರಣದ ಮುಂಚೂಣಿಯಲ್ಲಿ ಇಂಥವರಿದ್ದೂ ಸ್ವಯಂ ಅತಿರಥನಾದ ದುರ್ಯೋಧನನಿಗೆ ಕಾಲಮಹಿಮೆಯಿಂದ ಸೋಲಾಯಿತು! ಗಾಂಧಾರೀ ಪುತ್ರನೆಲ್ಲಿರುವನೋ?! ಇದೋ ರಣಾರ್ಣವ ಪಾರಂಗತನಾದ ಕುರುರಾಜನು ಇಳೆಗುರುಳಿದ ಗಜ–ತುರಗ–ನರ–ರಥಗಳ ಪ್ರಾಕಾರದ ಮಧ್ಯದಲ್ಲಿದ್ದಾನೆ. ಇಟ್ಟ ಕಿರೀಟ ಕೆಳಗುರುಳಿ, ಕೆಂಗೂದಲೆಲ್ಲ ಕೆದರಿ, ಗದೆಯ ಪೆಟ್ಟಿಂದಾದ ಹುಣ್ಣುಗಳಿಂದ ರಕ್ತ ಸುರಿದು, ಮೈಯೆಲ್ಲ ಕೆಂಪಾಗಿ, ಮೃತ್ಯುಶಯ್ಯೆಯ ಮೇಲಿರುವ ದುರ್ಯೋಧನನು–ಪಡುವಣ ಪರ್ವತವನ್ನೇರಿ ಅಸ್ತಂಗತನಾಗುವ ಸಂಧ್ಯಾವಗಾಢ ಸೂರ್ಯನಂತಿರುವನು. (ಬಳಿ ಸಾರಿ) ಅಯ್ಯಾ, ಕುರುರಾಜ, ಏನಿದು? ಎಂಬ ನುಡಿಗಳನ್ನಾಡುತ್ತಾನೆ.

## ಈ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.

1. "ನನ್ನ ಹಲಾಯುಧದಿಂದ ಭೀಮನೆದೆಯನ್ನು ಉತ್ತು ಬರುತ್ತೇನೆ."
**ಆಯ್ಕೆ** : ಈ ವಾಕ್ಯವನ್ನು ಡಾ. ಎಲ್. ಬಸವರಾಜು ಅವರು ಕನ್ನಡಕ್ಕೆ ಭಾಷಾಂತರಿಸಿರುವ **'ನಾಟಕ ಸಂಪುಟ'** ಕೃತಿಯಿಂದ ಭಾಸನ **'ಊರುಭಂಗ'** ನಾಟಕವನ್ನು ಆರಿಸಿಕೊಳ್ಳಲಾಗಿದೆ.
**ಸಂದರ್ಭ** : ಭೀಮನಿಗೆ ಕೃಷ್ಣನು ತನ್ನ ತೊಡೆಯನ್ನು ತಟ್ಟಿಕೊಂಡು ರಹಸ್ಯವಾಗಿ ಸನ್ನೆ ಮಾಡುವುದೇ ತಡ, ಭೀಮಸೇನನು ಚೇತರಿಸಿಕೊಂಡೆದ್ದು ಎರಡು ಕೈಗಳಿಂದಲೂ ತನ್ನ ಚಿತ್ರಾಂಗದವೆಂಬ ಮಹಾಗದೆಯನ್ನೆತ್ತಿ, ಸಿಂಹನಾದ ಮಾಡಿ, ಬೀಸಿ ದುರ್ಯೋಧನನ ತೊಡೆಗೆ ಹೊಡೆದು, ದುರ್ಯೋಧನನನ್ನು ಭೀಮನು ನೆಲಕ್ಕುರುಳಿಸಿಬಿಟ್ಟ. ಅಯ್ಯಾ ದುರ್ಯೋಧನ, ಒಂದು ನಿಮಿಷ ಪ್ರಾಣವನ್ನು ಬಿಗಿಹಿಡಿದುಕೋ. ಎಂದು ಹೇಳುವ ಸಂದರ್ಭದಲ್ಲಿ ಬಲರಾಮನು ಈ ಮಾತನ್ನು ಹೇಳುತ್ತಾನೆ.
**ಸ್ವಾರಸ್ಯ** : ಭೀಮನು ಮೋಸದಿಂದ, ಅಧರ್ಮದಿಂದ ದುರ್ಯೋಧನನ ತೊಡೆಗೆ ಹೊಡೆದು ನೆಲಕ್ಕೆ ಉರುಳಿಸಿದ ಇವನ್ನು ನನ್ನ ನೇಗಿಲಿನಿಂದ ಉಳುತ್ತೇನೆ ಎಂಬ ಮಾತು ಸ್ವಾರಸ್ಯಕರವಾಗಿದೆ.

2. "ಅಂತಹವನೂ ಇಂದು ನನ್ನನ್ನು ಮೋಸದಿಂದ ಗೆದ್ದನೆಂದರೆ ನಾನು ಸೋತಂತಾಗಲಿಲ್ಲ."
**ಆಯ್ಕೆ** : ಈ ವಾಕ್ಯವನ್ನು ಡಾ. ಎಲ್. ಬಸವರಾಜು ಅವರು ಕನ್ನಡಕ್ಕೆ ಭಾಷಾಂತರಿಸಿರುವ **'ನಾಟಕ ಸಂಪುಟ'** ಕೃತಿಯಿಂದ ಭಾಸನ **'ಊರುಭಂಗ'** ನಾಟಕವನ್ನು ಆರಿಸಿಕೊಳ್ಳಲಾಗಿದೆ.
**ಸಂದರ್ಭ** : ಬಲರಾಮನು ನನ್ನ ಕಣ್ಣೆದುರಿಗೆ ನಿನ್ನನ್ನು ಮೋಸಗೊಳಿಸಿದರಲ್ಲಾ ಎಂದು ನನಗೆ ರೋಷ ಎಂದು ಹೇಳಿದ ಸಂದರ್ಭದಲ್ಲಿ ಭೀಮನು ಹತ್ತಿ ಉರಿಯುವ ಅರಗಿನ ಮನೆಯಿಂದ ಬಹಳ ಚತುರತೆಯಿಂದ ಪಾರಾದನು. ಅಂತಹವನೂ ಇಂದು ನನ್ನನ್ನು ಮೋಸದಿಂದ ಗೆದ್ದನೆಂದರೆ ನಾನು ಸೋತಿಲ್ಲ, ಯೋಚಿಸಿ ನೋಡು ಎಂದು ದುರ್ಯೋಧನನು ಅಭಿಮಾನದಿಂದ ಬಲರಾಮನಿಗೆ ಹೇಳಿದನು.
**ಸ್ವಾರಸ್ಯ** : ದುರ್ಯೋಧನನು ಸೋತರು ಅವನಿಗೆ ಅವಮಾನವಾಗಲಿಲ್ಲ; ಭೀಮನು ತನ್ನನ್ನು ಮೋಸದಿಂದಲ್ಲದೇ ನೇರವಾಗಿ ಗೆಲ್ಲಲು ಸಾಧ್ಯವಾಗಲಿಲ್ಲ ಎಂಬ ದುರ್ಯೋಧನನ ಮಾತು ಸ್ವಾರಸ್ಯಕರವಾಗಿದೆ.

3. "ನಿನಗೆ ಚಿರಪರಿಚಿತವಾಗಿದ್ದ ಈ ತೊಡೆಯಿನ್ನು ನಿನ್ನ ಭಾಗಕ್ಕಿಲ್ಲವಪ್ಪ!"

**ಆಯ್ಕೆ :** ಈ ವಾಕ್ಯವನ್ನು ಡಾ. ಎಲ್. ಬಸವರಾಜು ಅವರು ಕನ್ನಡಕ್ಕೆ ಭಾಷಾಂತರಿಸಿರುವ **'ನಾಟಕ ಸಂಪುಟ'** ಕೃತಿಯಿಂದ ಭಾಸನ **'ಊರುಭಂಗ'** ನಾಟಕವನ್ನು ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ಈ ಮಾತನ್ನು ದುರ್ಯೋಧನನು ತನ್ನ ಮಗನಾದ ದುರ್ಜಯನಿಗೆ ಹೇಳಿದನು. ತಂದೆಯನ್ನು ಹುಡುಕಿಕೊಂಡು ರಣರಂಗಕ್ಕೆ ಬಂದ ದುರ್ಜಯನು ತೊಡೆಯ ಮೇಲೆ ಕುಳಿತುಕೊಳ್ಳುತ್ತೇನೆಂದು ತೊಡೆಯೇರಲು ಹೋಗುತ್ತಾನೆ. ಆ ಸಂದರ್ಭದಲ್ಲಿ ತಡೆದು "ಚಿನ್ನ ಮತ್ತೆಲಿಯಾದರೂ ಕುಳಿತುಕೊಳ್ಳಪ್ಪ! ಇದುವರೆಗೂ ನೀನು ಕುಳಿತು ಆಡಿ, ಮಲಗಿ, ನಿನಗೆ ಚಿರಪರಿಚಿತವಾಗಿದ್ದ ಈ ತೊಡೆಯಿನ್ನು ನಿನ್ನ ಭಾಗ್ಯಕ್ಕಿಲ್ಲ" ಎಂದು ಹೇಳುತ್ತಾನೆ.

**ಸ್ವಾರಸ್ಯ :** ತನ್ನ ಪ್ರೀತಿಯ ಮಗನು ಕುಳಿತು ಆಟವಾಡಿದ್ದ ತೊಡೆಯು ಇಂದು ಮುರಿದು ಹೋಗಿದೆ ಎಂದು ದುರ್ಯೋಧನನು ನೋವಿನಿಂದ ಹೇಳುವ ಮಾತು ಸ್ವಾರಸ್ಯಕರವಾಗಿದೆ.

4. "ಹೋಗು ಮಗನೇ, ಹಾಗೆಂದು ವೃಕೋದರನನ್ನು ಕೇಳು ಹೋಗು."

**ಆಯ್ಕೆ :** ಈ ವಾಕ್ಯವನ್ನು ಡಾ. ಎಲ್. ಬಸವರಾಜು ಅವರು ಕನ್ನಡಕ್ಕೆ ಭಾಷಾಂತರಿಸಿರುವ **'ನಾಟಕ ಸಂಪುಟ'** ಕೃತಿಯಿಂದ ಭಾಸನ **'ಊರುಭಂಗ'** ನಾಟಕವನ್ನು ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ದುರ್ಜಯನು ತೊಡೆಯ ಮೇಲೆ ಕುಳಿತುಕೊಳ್ಳುತ್ತೇನೆಂದು ತೊಡೆಯೇರಲು ಹೋಗುತ್ತಾನೆ. ಚಿಣ್ಣ, ಮತ್ತೆಲ್ಲಿಯಾದರೂ ಕುಳಿತುಕೊಳ್ಳಪ್ಪ! ಇದುವರೆಗೂ ನೀನು ಕುಳಿತು, ಆಡಿ, ಮಲಗಿ, ನಿನಗೆ ಚಿರಪರಿಚಿತವಾಗಿದ್ದ ಈ ತೊಡೆಯಿನ್ನು ನಿನ್ನ ಭಾಗಕ್ಕಿಲ್ಲವಪ್ಪ! ಎಂದಾಗ ದುರ್ಜಯನು ಯಾಕಪ್ಪಾಜಿ, ನೀವೆಲ್ಲಿಗೆ ಹೋಗುತ್ತೀರಿ? ಎಂದು ಕೇಳುತ್ತಾನೆ. ನನ್ನ ತಮ್ಮಂದಿರು ಇರುವಲ್ಲಿಗೆ ಹೋಗುತ್ತೇನೆ. ಎಂದು ದುರ್ಯೋಧನನು ಹೇಳುತ್ತಾನೆ. ಆಗ ದುರ್ಜಯನು ಅಪ್ಪಾಜಿ, ನನ್ನನ್ನೂ ಅಲ್ಲಿಗೆ ಕರೆದುಕೊಂಡು ಹೋಗಿ. ಎಂದು ಕೇಳಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :** ಭೀಮನು ಮೋಸದಿಂದ ನನ್ನ ತಮ್ಮಂದಿರನ್ನು ಕೊಂದು ಸ್ವರ್ಗಕ್ಕೆ ಕಳುಹಿಸಿದ್ದಾನೆ. ಈಗ ನನ್ನ ತೊಡೆ ಮುರಿದು ಸ್ವರ್ಗಕ್ಕೆ ಕಳುಹಿಸುವುದರಲ್ಲಿ ಇದ್ದಾನೆ ಎಂದು ದುರ್ಯೋಧನ ಮಾತಿನಲ್ಲಿ ಸ್ವಾರಸ್ಯವಿದೆ.

## ಉ) ಬಿಟ್ಟ ಸ್ಥಳದಲ್ಲಿ ಸೂಕ್ತಪದವನ್ನು ತುಂಬಿರಿ.

1. ಕುರುಕುಲದ ಪಿತೃಗಳಿಗೆ ______________ ಕೊಡಲು ಪಾಂಡವ ಮೇಘಗಳು ಜೀವಿಸಿರಲಿ.
2. ಎರಡು ತೊಡೆಗಳನ್ನಷ್ಟೇ ಅಲ್ಲ, ತಂದೆತಾಯಿಗಳಿಗೆ ____________ ನನ್ನ ಭಾಗ್ಯವನ್ನೂ ಅಪಹರಿಸಿಬಿಟ್ಟ.
3. ಹೃದಯದಲ್ಲಿ ಸದಾ ಸನ್ನಿಹಿತವಾಗಿರುವ ____________ ನನ್ನನ್ನೀಗ ದಹಿಸುತ್ತಿದೆ.
4. ಅಪ್ಪಾಜಿ, ನಾನು ನಿಮ್ಮ ____________ ಮೇಲೆ ಕುಳಿತುಕೊಳ್ಳುತ್ತೇನೆ!
5. ಮೃತ್ಯುಶಯ್ಯೆಯ ಮೇಲಿರುವ __________ ಪಡುವಣ ಪರ್ವತವನ್ನೇರಿ ಅಸ್ತಂಗತನಾಗುವ ಸಂಧ್ಯಾವಗಾಢ ಸೂರ್ಯನಂತಿರುವನು.

## ಸರಿ ಉತ್ತರಗಳು.

1. **ಜಲಾಂಜಲಿ**
2. **ಅಭಿವಂದಿಸುವ**
3. **ಪುತ್ರಸ್ನೇಹವು**
4. **ತೊಡೆಯ**
5. **ದುರ್ಯೋಧನನು**

## ಭಾಷಾ ಚಟುವಟಿಕೆ

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಕ್ರಿಯಾಪದ ಎಂದರೇನು?

**ಉತ್ತರ :** ಕ್ರಿಯೆ ಪೂರ್ಣಗೊಂಡಿದೆ ಎಂಬ ಅರ್ಥವನ್ನು ಸೂಚಿಸುವ ಪದವೇ ಕ್ರಿಯಾಪದ.

2. ಕ್ರಿಯಾಪ್ರಕೃತಿ ಎಂದರೇನು? ಉದಾಹರಣೆ ಕೊಡಿ.

**ಉತ್ತರ :** ಕ್ರಿಯಾರ್ಥವನ್ನು ಕೊಡುವ ಮತ್ತು ಪ್ರತ್ಯಯವನ್ನು ಹೊಂದದಿರುವ ಶಬ್ಧವು ಕ್ರಿಯಾ ಪ್ರಕೃತಿ ಅಥವಾ ಧಾತು.

**ಉದಾಹರಣೆ :** ಮಾಡು, ತಿನ್ನು, ಹೋಗು, ಮಲಗು, ಓದು, ಕೇಳು, ನೋಡು, ಬರು ಇತ್ಯಾದಿ.

3. ಸಕರ್ಮಕ ಧಾತುವನ್ನು ಉದಾಹರಣೆ ಸಹಿತ ವಿವರಿಸಿ.

**ಉತ್ತರ :** ಕರ್ಮಪದವನ್ನು ಬಯಸುವ ಧಾತುಗಳೇ ಸಕರ್ಮಕ ಧಾತುಗಳು.

**ಉದಾ:** ರಾಮನು ಗಿಡವನ್ನು ನೆಟ್ಟನು.

ಶಿಲ್ಪಿಗಳು ಗುಡಿಯನ್ನು ಕಟ್ಟಿದರು.

ವಿದ್ಯಾರ್ಥಿಗಳು ಪಾಠವನ್ನು ಓದಿದರು.

ರಾಮನು ಏನನ್ನು ನೆಟ್ಟನು ಎಂಬ ಪ್ರಶ್ನೆಗೆ – ಗಿಡವನ್ನು,

ಶಿಲ್ಪಿಗಳು ಏನು ಕಟ್ಟಿದರು ಎಂಬ ಪ್ರಶ್ನೆಗೆ – ಗುಡಿಯನ್ನು,

ವಿದ್ಯಾರ್ಥಿಗಳು ಏನನ್ನು ಓದಿದರು ಎಂಬ ಪ್ರಶ್ನೆಗೆ – ಪಾಠವನ್ನು ಎಂಬ ಉತ್ತರ ದೊರೆಯುತ್ತದೆ. ಮತ್ತು ಕರ್ಮಪದಗಳು ಇಲ್ಲಿ ಮುಖ್ಯವಾಗುತ್ತವೆ.

4. ಅಕರ್ಮಕ ಧಾತುಗಳಿಗೆ ಐದು ನಿದರ್ಶನ ಕೊಡಿ.

**ಉತ್ತರ** : ಕರ್ಮಪದವನ್ನು ಬಯಸದೇ ಇರುವ ಧಾತುಗಳೇ ಅಕರ್ಮಕ ಧಾತುಗಳು.

**ಉದಾ** : ಕೂಸು ಮಲಗಿತು.

ಅವನು ಬದುಕಿದನು.

ಆಕಾಶ ಹೊಳೆಯುತ್ತಿದೆ.

ಗಾಳಿಯು ಬೀಸುತ್ತಿದೆ.

ಮಲಗು, ಬದುಕು, ಹೊಳೆಯು, ಬೀಸು ಎಂಬ ಧಾತುಗಳು ಕರ್ಮಪದಗಳನ್ನು ಬಯಸುವುದಿಲ್ಲ.

5. ಹಳಗನ್ನಡ ವಿಭಕ್ತಿ ಪ್ರತ್ಯಯಗಳಾವುವು?

**ಉತ್ತರ** : ಮ್,ಅಂ, ಇಂ, ಇಂದಂ, ಇಂದೆ, ಗೆ, ಕೆ, ಕ್ಕೆ, ಅತ್ತಣಿಂ, ಅತ್ತಣಿಂದಂ, ಅತ್ತಣಿಂದೆ, ಅ, ಒಳ್

6. ವಿಭಕ್ತಿ ಪಲ್ಲಟ ಎಂದರೇನು?

**ಉತ್ತರ** : ನಾವು ಮಾತನಾಡುವಾಗ ಪ್ರಕೃತಿಗಳಿಗೆ ಯಾವ ವಿಭಕ್ತಿ ಪ್ರತ್ಯಯವನ್ನು ಬಳಸಬೇಕೋ ಅದನ್ನು ಬಳಸದೆ ಬೇರೆ ವಿಭಕ್ತಿ ಪ್ರತ್ಯಯವನ್ನು ಬಳಸಿ ಮಾತಾನಾಡುವುದುಂಟು. ಹೀಗೆ ಒಂದು ವಿಭಕ್ತಿ ಪ್ರತ್ಯಯದ ಬದಲಿಗೆ ಅರ್ಥ ವ್ಯತ್ಯಾಸವಾಗದಂತೆ ಇನ್ನೊಂದು ವಿಭಕ್ತಿ ಪ್ರತ್ಯಯವನ್ನು ಬಳಸುವ ಕ್ರಮಕ್ಕೆ 'ವಿಭಕ್ತಿ ಪಲ್ಲಟ' ಎಂದು ಹೇಳುತ್ತೇವೆ.

## ಆ) ಕೊಟ್ಟಿರುವ ವಾಕ್ಯಗಳಲ್ಲಿ ಸಕರ್ಮಕ ಮತ್ತು ಅಕರ್ಮಕ ಧಾತುಗಳನ್ನು ಗುರುತಿಸಿ ಬರೆಯಿರಿ

1. ವಿದ್ಯಾರ್ಥಿನಿಯರು ಆಟವನ್ನು ಆಡಿದರು. – ಸಕರ್ಮಕ ಧಾತು
2. ಗಾಳಿಯು ಬೀಸುತ್ತಿದೆ. – ಅಕರ್ಮಕ ಧಾತು
3. ಹಕ್ಕಿಗಳು ಚಿಲಿಪಿಲಿಗುಟ್ಟಿದವು. – ಅಕರ್ಮಕ ಧಾತು
4. ರೈತನು ಹೊಲವನ್ನು ಉಳುತ್ತಾನೆ. – ಸಕರ್ಮಕ ಧಾತು

## ಇ) ಕೊಟ್ಟಿರುವ ಗಾದೆಗಳ ಅರ್ಥವನ್ನು ವಿವರಿಸಿ ಬರೆಯಿರಿ.

### ಆರೋಗ್ಯವೇ ಭಾಗ್ಯ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು. ಗಾದೆಗಳು ವೇದಗಳಿಗೆ ಸಮ. ಇವು ನಮ್ಮ ಹಿರಿಯರ ಅನುಭವದ ಮಾತುಗಳು. ಗಾದೆಗಳು ನೋಡಲು ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಅಂತಹ ಗಾದೆಗಳಲ್ಲಿ ಆರೋಗ್ಯವೇ ಭಾಗ್ಯ ಈ ಗಾದೆ ಮಾತು ಸಹ ಒಂದು.

ಮನುಷ್ಯ ನೆಮ್ಮದಿಯಿಂದ ಬಾಳಬೇಕು. ಆನಂದದಿಂದ ಬದುಕಬೇಕು ಅವನಿಗೆ ಅಂತಹ ನೆಮ್ಮದಿ ಆನಂದಗಳನ್ನು ಉತ್ತಮ ಆರೋಗ್ಯ ಭಾಗ್ಯವು ಮಾತ್ರ ನೀಡುತ್ತದೆ. ಆರೋಗ್ಯದಿಂದಲೇ ಭಾಗ್ಯವೆಂದ ಮೇಲೆ ಅವನು ಅಂತಹ ಆರೋಗ್ಯ ಭಾಗ್ಯವನ್ನು ಪಡೆದಿರಲೇಬೇಕಾಗುತ್ತದೆ. ಮನುಷ್ಯ ಬದುಕಿರುವ ತನಕವೂ ಆರೋಗ್ಯ ಭಾಗ್ಯ ಅತಿ ಮುಖ್ಯ. ಅದರ ರಕ್ಷಣೆಗಾಗಿ ಸದಾ ಕಾಲವೂ ಎಚ್ಚರದಿಂದಿರುವ್ವದೆ ಅಷ್ಟೇ ಮುಖ್ಯ. ಮನುಷ್ಯನಿಗೆ ಸಂಪತ್ತು ಎಷ್ಟೆ ಇದ್ದರೂ ಆರೋಗ್ಯ ಸರಿಯಿಲ್ಲದಿದ್ದರೂ ಅದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ ಸಂಪತ್ತಿಲ್ಲದಿದ್ದರೂ ಆರೋಗ್ಯ ಸರಿಯಾಗಿದ್ದರೆ ಯಾವ ಸಂದರ್ಭದಲ್ಲಾದರೂ ನಾವು ಹಣವನ್ನು ಸಂಪಾದಿಸಬಹುದು. ದುಡಿಯುವ ಶಕ್ತಿ ಅವಶ್ಯಕ. ಅದಕ್ಕಾಗಿ ನಮಗೆ ಆರೋಗ್ಯ ಬೇಕು. ನಾವು ಎಲ್ಲಾ ಸಂದರ್ಭದಲ್ಲೂ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು.

### ಕೊಟ್ಟಿದ್ದು ತನಗೆ; ಬಚ್ಚಿಟ್ಟಿದ್ದು ಪರರಿಗೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು. ಗಾದೆಗಳು ವೇದಗಳಿಗೆ ಸಮ. ಇವು ನಮ್ಮ ಹಿರಿಯರ ಅನುಭವದ ಮಾತುಗಳು. ಗಾದೆಗಳು ನೋಡಲು ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಅಂತಹ ಗಾದೆಗಳಲ್ಲಿ ಈ ಗಾದೆ ಮಾತು ಸಹ ಒಂದು.

ತಾನು ಮಾಡಿದ ದಾನ ಯಾವತ್ತಿದ್ದರೂ ತನ್ನನ್ನು ಕಾಯುತ್ತದೆ. ತನಗೆ ಕಷ್ಟ ಬಂದಾಗ ಬೇರೆಯವರು ನನಗೂ ಸಹಾಯ ಮಾಡುತ್ತಾರೆ ಎಂಬ ನಂಬಿಕೆ ಇರಬೇಕು. ದಾನ ಮಾಡದೆ ಎಲ್ಲ ಸಂಪತ್ತನ್ನು ಬಚ್ಚಿಟ್ಟರೆ ಅದು ಬೇರೆಯವರ ಪಾಲಾಗುವುದು ಖಂಡಿತ. ಆದ್ದರಿಂದ ತನ್ನ ಸಂಪತ್ತಿನಲ್ಲಿ ಸ್ವಲ್ಪ ಭಾಗವನ್ನಾದರೂ ದಾನ ಮಾಡಬೇಕು ಎಂಬುದು ಈ ಗಾದೆಯ ಹೇಳಿಕೆ ಇಲ್ಲಿ ದಾನದ ಶ್ರೇಷ್ಠತೆಯನ್ನ ಹೇಳಿದೆ. ನಾವು ಮಾಡುವ ದಾನವನ್ನು ಪ್ರಚಾರ ಮಾಡಬಾರದು. ನಿಸ್ವಾರ್ಥ ಭಾವನೆಯಿಂದ ದಾನ ಮಾಡಬೇಕು.